ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

V ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕ, 2004

ಪರ್ಯಾಲೋಚನಾ ಪ್ರಸ್ತಾವ

†**ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):** ಮಾನ್ಯ ಅಧ್ಯಕ್ಷರೆ, "2004ನೇ ಸಾಲಿನ ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಇವತ್ತಿನದಿವಸ ನಮೆಲ್ಲರಿಗೂ ಗೊತ್ತಿರುವ ಹಾಗೆ ಮೇಲ್ಮನೆ ಹಾಗೂ ಕೆಳಮನೆಗಳಲ್ಲಿ ಬಾಲ್ಯ ವಿವಾಹ ಪದ್ದತಿ ಇದೆ. ಹಾಗೆಯೇ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಸಾಮೂಹಿಕ ಮದುವೆ ಮಾಡುವಾಗ ಸಣ್ಣ ಮಕ್ಕಳಿಗೆ ಮದುವೆ ಮಾಡುತ್ತಿರುವುದು ಕಂಡು ಬಂದಿದೆ. ಮತ್ತೆ ಈ ಸಮಾರಂಭಗಳಲ್ಲಿ ಹಲವಾರು ಜನ ಮಂತ್ರಿಗಳು ಮತ್ತು ಶಾಸಕರು ಭಾಗವಹಿಸಿದ್ದರು ಎನ್ನತಕ್ಕಂಥ ಆಪಾದನೆ ಬಂದಿದೆ. ಕೇಂದ್ರ ಸರ್ಕಾರದ 1929ನೇ ಅಧಿನಿಯಮ 19ರಲ್ಲಿ ಪ್ರತಿಬಂಧಕ ಶಿಶು ವಿವಾಹ ಕಾಯಿದೆ ಇದ್ದರೂ ಕೂಡ ಇದನ್ನು ಸರಿಯಾಗಿ ಕಂಟ್ರೋಲ್ ಮಾಡತಕ್ಕಂಥ; ಒಬ್ಬ ಆಫೀಸರ್ ಇರಲಿಲ್ಲ. ಆದ್ದರಿಂದ ಇದಕ್ಕಾಗಿ ಒಬ್ಬ ಆಫೀಸರ್‌ನ್ನು ನೇಮಕ ಮಾಡುವ ಮೂಲಕ ಎಲ್ಲೆಲ್ಲಿ ಸಾಮೂಹಿಕ ಮದುವೆಯಲ್ಲಿ ಶಿಶುವಿವಾಹ ನಡೆಸತಕ್ಕಂಥದ್ದನ್ನು ಪತ್ತೆ ಹಚ್ಚುವುದು ಮತ್ತು ಅದನ್ನು ಕಂಟ್ರೋಲ್ ಮಾಡುವುದಕ್ಕೋಸ್ಕರ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವುದೇ ಈ ಒಂದು ಶಿಶುವಿವಾಹ ಪ್ರತಿಬಂಧಕದ ತಿದ್ದುಪಡಿಯ ಉದ್ದೇಶವಾಗಿದೆ. ಇದಕ್ಕೆ ಹೊಸದಾಗಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡುತ್ತಿಲ್ಲ. ನಮ್ಮ ಇಲಾಖೆಯಲ್ಲಿರತಕ್ಕಂಥ ಒಬ್ಬ ಅಧಿಕಾರಿಗೆ ತಾಲ್ಲೂಕು ಮಟ್ಟದಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ಕೊಟ್ಟು ಸಾಮೂಹಿಕ ಮದುವೆ ಎಲ್ಲಿಯಾದರೂ ಆದರೆ ಅಂಥ ಸಂದರ್ಭದಲ್ಲಿ ಈ ವ್ಯಕ್ತಿ ಅಲ್ಲಿಗೆ ಹೋಗಿ ಪರಿಶೀಲನೆ ಮಾಡಬೇಕೆಂದು ಮತ್ತು ಈ ಅಧಿಕಾರಿಯ ಗಮನಕ್ಕೆ ತಂದು ಸಾಮೂಹಿಕ ಮದುವೆಗಳು ನಡೆಯಬೇಕು. ಮತ್ತೆ ಇದರ ಜೊತೆಗೆ ಅಧಿಕಾರೇತರ ಸಲಹಾ ಮಂಡಳಿಯನ್ನು ರಚನೆ ಮಾಡುತ್ತಿದ್ದೇವೆ. ಹಾಗೆಯೇ, ಇದರಲ್ಲಿ ಕನಿಷ್ಟ ಇಬ್ಬರು ಮಹಿಳಾ ಕಾರ್ಯಕರ್ತರು ಇರಬೇಕೆಂಬ ನಿಯಮವನ್ನು ಕೂಡ ಮಾಡಿದ್ದೇವೆ. ಇದರಿಂದ ಎಲ್ಲೆಲ್ಲಿ ಸಾಮೂಹಿಕ ಮದುವೆ ಮಾಡುವಂಥ ಕಡೆ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳಿಗೆ ಮದುವೆ ಮಾಡುವಂಥದ್ದನ್ನು ತಡೆಯುವುದಕ್ಕೆ ಸಹಾಯವಾಗುತ್ತದೆ ಎನ್ನತಕ್ಕಂಥದ್ದೇ ಇದರ ಮೂಲ ಉದ್ದೇಶ. ಆದ್ದರಿಂದ ನಮ್ಮ ಈ ಒಂದು ಮಸೂದೆಯನ್ನು ತಾವು ಅಂಗೀಕಾರ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಸಾಮೂಹಿಕ ಮದುವೆ ಮಾಡುವಂಥ ಕಡೆ ಚಿಕ್ಕ ಮಕ್ಕಳಿಗೆ ಮದುವೆ ಮಾಡುವುದನ್ನು ತಡೆಯುವುದಕ್ಕೋಸ್ಕರ ಎಂದು ತಾವು ಹೇಳುತ್ತಿದ್ದೀರಿ. ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ಸಿಂಗಲ್ ಮ್ಯಾರೇಜ್ ಮಾಡುವ ಕಡೆ ಚಿಕ್ಕಮಕ್ಕಳಿಗೆ ಮದುವೆ ಮಾಡಬಹುದೆ?

ಶ್ರೀಮತಿ ಮೋಟಮ್ಮ: ಅದೂ ಕೂಡ ಸಾಧ್ಯವಿಲ್ಲ. ಇದು ಹೆಚ್ಚಾಗಿ ಸಾಮೂಹಿಕ ಮದುವೆಯಲ್ಲಿ ಕಂಡು ಬಂದಿದೆ. ಒಟ್ಟಾರೆಯಾಗಿ ಹೇಳುವುದಾದರೆ, 18 ವರ್ಷಕ್ಕಿಂತ ಕೆಳಗಿನ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಸಂಬಂಧಪಟ್ಟಿದೆ.

---

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಅಧ್ಯಕ್ಷರು: ಅಪ್ರಾಪ್ತ ವಯಸ್ಸಿನವರು ಎಂದು ಹೇಳುವುದು ಸರಿ.

ಶ್ರೀಮತಿ ಮೋಟಮ್ಮ: ನಿಮ್ಮ ಸಲಹೆಗೆ ನನ್ನ ಅಭಿನಂದನೆಗಳು.

†**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):** ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಏನ್ನೊಂದು ಮಸೂದೆಯನ್ನು ತಂದಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇಲ್ಲಿ ಶಿಶುವಿವಾಹ ಪ್ರತಿಬಂಧಕ ಎಂದು ಹೇಳಿದ್ದಾರೆ. ಆದರೆ ನಾವು ಹೊರಗಡೆ ಇದನ್ನು ಬಾಲ್ಯವಿವಾಹ ಎಂದು ಕರೆಯುತ್ತೇವೆ. ಇವರು ಶಿಶುವಿವಾಹ ಎಂದು ಹೇಳಿದ್ದಾರೆ. ಆದರೆ, ಶಿಶು ಮತ್ತು ಬಾಲ್ಯ ಎನ್ನತಕ್ಕಂಥದ್ದಕ್ಕೆ ಬಹಳಷ್ಟು ವ್ಯತ್ಯಾಸ ಇದೆ. ಶಿಶು ಎಂದರೆ ಬಹಳ ಪುಟ್ಟ ಮಗು ಎಂದಥ. ಬಾಲ್ಯ ಎಂದರೆ 18 ವರ್ಷಕ್ಕಿಂಥ ಕೆಳಗಡೆ ಮತ್ತು ಶಿಶುಗಿಂತ ದೊಡ್ಡದು.

ಅಧ್ಯಕ್ಷರು: ಇದನ್ನು ಅಪ್ರಾಪ್ತ ವಯಸ್ಸಿನವರೆಂದು ಬದಲಾವಣೆ ಮಾಡಿಕೊಳ್ಳಬಹುದು.

ಶ್ರೀ ಜಗದೀಶ್ ಶೆಟ್ಟರ್: ಆದ್ದರಿಂದ, ಇದಕ್ಕೆ ತಾವು ಕೊಟ್ಟಿರತಕ್ಕಂಥ ಹೆಡ್ಡಿಂಗ್ ಸರಿಯಿಲ್ಲ. ಶಿಶು ಎಂದರೆ ಅದರ ಅರ್ಥವೇ ಬೇರೆಯಾಗುತ್ತದೆ. ಶಿಶು ಎಂದರೆ ಚಿಕ್ಕ ಮಕ್ಕಳು ಅಥವಾ ಕೂಸು. ಕೂಸುಗಳ ಲಗ್ನ ಮಾಡಬಾರದು ಎನ್ನತಕ್ಕಂಥ ರೀತಿಯಲ್ಲಿ ಇದಾಗುತ್ತದೆ. ಮತ್ತೆ 5 ವರ್ಷಕ್ಕಿಂಥ ಚಿಕ್ಕ ಮಕ್ಕಳ ಮದುವೆ ಎಂದಾಗುತ್ತದೆ.

ಅಧ್ಯಕ್ಷರು: ರಾಜಸ್ಥಾನದಲ್ಲಿ ಈ ರೀತಿ ಕೂಡ ನಡೆಯುತ್ತವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಕೆಲವು ಕಡೆ ಈ ರೀತಿಯಾದ ಸಂಪ್ರದಾಯಗಳಿವೆ. ಆದರೆ ಇವರು ಮಾಡಿರತಕ್ಕಂಥ ಪದ ಪ್ರಯೋಗ ಸರಿಯಲ್ಲ. ಇದರ ಬದಲಾಗಿ ಬಾಲ್ಯವಿವಾಹ ಎಂದು ಹೇಳಿದರೆ ಪರವಾಗಿಲ್ಲ. ಈ ರೀತಿ ತಿದ್ದುಪಡಿ ಮಾಡಿಕೊಳ್ಳಬೇಕು. ಮತ್ತೆ ಇತ್ತೀಚೆಗೆ ಸಾಮೂಹಿಕ ವಿವಾಹಗಳಲ್ಲಿ ಬಾಲ್ಯ ವಿವಾಹಗಳು ಬಹಳಷ್ಟು ಆಗುತ್ತಿವೆ. ಇದು ಕೆಲವು ಸಾರಿ ಸಂಘಟನೆಯ ಗಮನಕ್ಕೆ ಬರಬಹುದು ಅಥವಾ ಬಾರದೇ ಕೂಡ ಇರಬಹುದು. ನಮ್ಮ ಸಮಾಜದಲ್ಲಿ ಮತ್ತು ನಮ್ಮ ವರ್ಗದಲ್ಲಿ ರೀತಿಯಾದ ಸಂಪ್ರದಾಯ ಇದೆ. ಆದ್ದರಿಂದ ನಾವೇನೂ ಮಾಡುವುದಕ್ಕೆ ಆಗುವುದಿಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ, ಇದಕ್ಕೆ ರಿಸ್ಟ್ರಿಕ್ಷನ್ ಮಾಡುವಂಥಾದ್ದು ಆಗಬೇಕಷ್ಟೆ. ಆದರೆ ರಿಸ್ಟ್ರಿಕ್ಷನ್ ಹಾಕುವಂಥದ್ದು ಆಗಬೇಕಾಗುತ್ತದೆ, ಒಂದು ವೇಳೆ ರಿಸ್ಟ್ರಿಕ್ಷನ್ ಹಾಕದಿದ್ದರೆ ಈ ರೀತಿಯಾದ ಸಂಪ್ರದಾಯಗಳು ಮುಂದುವರೆಯುವುದಕ್ಕೆ ಸಾಧ್ಯವಿದೆ. ಸಾಕಷ್ಟು ಜಾತಿ, ವರ್ಗ ಬೇರೆ ಬೇರೆ ಸಂಪ್ರದಾಯಗಳು, ಸಂಸ್ಕೃತಿಗಳು ಸಾಕಷ್ಟು ಇರುತ್ತವೆ. ಇವತ್ತು ಸಮಾಜದ ವ್ಯವಸ್ಥೆಯಲ್ಲಿ ಏನು ಬದಲಾವಣೆಗಳು ಆಗಬೇಕೆಂದು ಹೊರಟಾಗ, ಅಂತಹ ಸಂದರ್ಭದಲ್ಲಿ ಅದಕ್ಕೆ ತಕ್ಕಂತೆ ಎಲ್ಲರೂ ನಡೆದುಕೊಳ್ಳಬೇಕಾಗುತ್ತದೆ. ಅದನ್ನು ಬಿಟ್ಟು ನಾವು ನಮ್ಮದೇ ಆದ ಒಂದು ವ್ಯವಸ್ಥೆಯಲ್ಲಿ ನಾವಿದ್ದೇವೆಂದು ಹೇಳಿದರೆ ಅದು ಸರಿಯಾದಂಥ ವ್ಯವಸ್ಥೆಯಲ್ಲ. ಹೀಗಾಗಿ ಇವತ್ತು ಈ ರೀತಿಯಾದಂಥ ಬಾಲ್ಯವಿವಾಹಗಳು ಆಗುವಂಥ ಕೆಲಸಗಳನ್ನು ತಡೆಯುವಂಥದ್ದು ಎಲ್ಲಾ ಕಡೆ ಆಗಬೇಕು. ಸರ್ಕಾರದ ಕಡೆಯಿಂದಲೂ ಆಗಬೇಕು, ಸಮಾಜ ಸೇವಕರುಗಳಿಂದ ಆಗಬೇಕಾಗುತ್ತದೆ. ಹಾಗೂ ಜನ ಪ್ರತಿನಿಧಿಗಳಿಂದಲೂ ಆಗಬೇಕಾಗಿದೆ. ಈಗ ನಾವು ಎಷ್ಟೋ ಕಡೆ ನೋಡಿದ್ದೇವೆ, ಮಾನ್ಯ ಮಂತ್ರಿಗಳು ಹೋಗಿ ಭಾಗವಹಿಸಿರುವಂಥದ್ದು, ಶಾಸಕರೆ ಹೋಗಿ ಭಾಗವಹಿಸಿರುವಂಥದ್ದು, ಅವರ ಸಮಕ್ಷಮದಲ್ಲಿ ಬಾಲ್ಯವಿವಾಹಗಳು ನಡೆದಿರುವಂಥದ್ದು ಇದು ಪತ್ರಿಕೆಗಳಲ್ಲಿಯೂ ಬಂದಿದೆ. ಆದರೆ ಯಾರು ಏನೂ ಸರ್ಕಾರದ ಕ್ರಮ ಆಗದಿದ್ದರೆ ಇದು ಹೀಗೆಯೇ ನಡೆದುಕೊಂಡು ಹೋಗುತ್ತದೆ. ಅದಕ್ಕಾಗಿ ಒಂದು ರಿಸ್ಟ್ರಿಕ್ಷನ್ ಬೇಕು ಎನ್ನುವಂಥದ್ದು ಅದಕ್ಕೆ ಒಂದು ಕಂಟ್ರೋಲ್ ಆಗುವುದಕ್ಕಾಗಿ ಈ ಒಂದು

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಕಾಯಿದೆಯನ್ನು ತಂದಿರುತ್ತೀರಿ, ಮತ್ತು ಇದರಲ್ಲಿ ಸಲಹಾ ಸಮಿತಿಯನ್ನು ಮಾಡಿದ್ದಾರೆ, ಆಮೇಲೆ ಇದನ್ನು ಸಾರ್ವಜನಿಕವಾಗಿ ಸಾಮೂಹಿಕವಾಗಿ ವಿವಾಹಗಳು ನಡೆದಾಗ ಅದರ ಮಾಹಿತಿಯನ್ನು ಆ ಅಧಿಕಾರಿಗಳ ಗಮನಕ್ಕೆ ತರುವಂಥದ್ದು ಇವೆಲ್ಲಾ ಮಾಡಿದ್ದೀರಿ ಇದು ಒಳ್ಳೆಯ ಪ್ರೊಸೀಜರ್. ಮುಂದೆ ಇದನ್ನು ಉಲ್ಲಂಘನೆ ಮಾಡಿದರೆ ಅವರಿಗೆ ಏನು ಶಿಕ್ಷೆ, ಅದರ ಬಗ್ಗೆ ಸ್ಪಷ್ಟತೆ ಏನು ನನಗೆ ಕಾಣಲಿಲ್ಲ. ಅವರಿಗೆ ಏನಾದರೂ ಶಿಕ್ಷೆಯಾಗಬೇಕಲ್ಲಾ, ಬರೀ ನೀವು ರಿಸ್ಟ್ರಿಕ್ಷನ್ ತಂದಿರಿ, ಒಂದು ಕಮಿಟಿಯನ್ನು ಮಾಡಿದಿರಿ ಅಧಿಕಾರಿಗಳಿಗೆ ಅದನ್ನು ಪರಿಶೀಲನೆ ಮಾಡುವುದಕ್ಕೆ ಹೇಳಿದಿರಿ, ಅದು ಎಲ್ಲಾ ಆಯಿತು, ನಾಳೆ ಯಾರೋ ಒಬ್ಬ ಅಧಿಕಾರಿ ಅದನ್ನು ಉಲ್ಲಂಘನೆ ಮಾಡುತ್ತಾರೆ, ಯಾರೋ ಒಬ್ಬರು ಸಂಘಟನೆ ಮಾಡಿದವರು ಉಲ್ಲಂಘನೆ ಮಾಡುತ್ತಾರೆ, ಅದನ್ನು ಉಲ್ಲಂಘನೆ ಮಾಡಿದಾಗ ಅದಕ್ಕೆ ಏನು ಶಿಕ್ಷೆ, ಯಾರು ಜವಾಬ್ದಾರರು, ಯಾರನ್ನು ಹೊಣೆಗಾರರನ್ನಾಗಿ ನೀವು ಮಾಡುತ್ತೀರಿ. ಸಾಮೂಹಿಕವಾಗಿ ಬಾಲ್ಯವಿವಾಹ ಮಾಡಿರುತ್ತಾರೋ ಅವರನ್ನು ಹೊಣೆಗಾರರನ್ನಾಗಿ ಮಾಡುತ್ತೀರೋ ಅಥವಾ ಅಲ್ಲಿ ಯಾರು ಬಾಲ್ಯ ವಿವಾಹದಲ್ಲಿ ಭಾಗವಹಿಸಿದ ಅವರ ಪಾಲಕರು ಇರುತ್ತಾರೆ, ಅವರ ಮಕ್ಕಳು ಇರುತ್ತಾರೆ. ಅವರನ್ನು ಜವಾಬ್ದಾರರನ್ನಾಗಿ ಮಾಡುತ್ತೀರೋ ನೀವು ಯಾರಿಗೆ ಶಿಕ್ಷೆ ಕೊಡುತ್ತೀರಿ. ಇದನ್ನು ಎನ್‌ಕ್ವಾಯರಿ ಯಾರು ಮಾಡಿರುತ್ತಾರೆ ಅವರಿಗೂ ಶಿಕ್ಷೆ ಕೊಡಿಸುವಂಥದ್ದು ಆಗುತ್ತದೆಯೇ? ಆ ರೀತಿಯಾಗಿ ಮಾಡಿದಾಗ ಮಾತ್ರ ಡಿಸ್‌ಕರೇಜ್ ಮಾಡಲಿಕ್ಕೆ ಆಗುತ್ತದೆ. ನೀವು ಯಾವುದೇ ರೀತಿಯ ಫೆನಾಲ್ಟಿಕ್ಷನ್ ಇಡದಿದ್ದರೆ ಈ ಕಾನೂನನ್ನು ತಂದರೂ ಉಪಯೋಗವಾಗುವುದಿಲ್ಲ. ಅಧಿಕಾರಿಗಳು ಪರಿಶೀಲನೆ ಮಾಡುತ್ತಾರೆ, ಸಲಹಾ ಸಮಿತಿಯವರು ಕುಳಿತು ಮೀಟಿಂಗ್ ಮಾಡುತ್ತಾರೆ ಎಲ್ಲಾ ಸರಿಯಾಗಿದೆ ಎಂದು ರಿಪೋರ್ಟ್ ಕೊಡುತ್ತಾರೆ. ಆದರೆ ಇದಕ್ಕೆ ಏನೂ ಕಂಟ್ರೋಲ್ ಬರುವುದಿಲ್ಲ, ಅದರ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟು ಅದರ ಒಂದು ಸೂಕ್ತವಾದ ಬದಲಾವಣೆಯನ್ನು ಕಾನೂನಿನಲ್ಲಿ ತರಬೇಕು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

†ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಕಡೂರು): ಮಾನ್ಯ ಅಧ್ಯಕ್ಷರೆ, ಈ ತಂದಿರತಕ್ಕಂಥ ವಿಧೇಯಕಕ್ಕೆ ನಾನು ಸ್ವಾಗತ ಮಾಡುತ್ತಾ, ಆದರೂ ಸಹಿತ ಇದು ಒಂದೊಂದು ರೂಪದಲ್ಲಿ ಕೂಡ ಮಾನ್ಯ ಸಚಿವರು ಉದಾಹರಣೆಯನ್ನು ಕೊಡಬೇಕಾಗುತ್ತದೆ. ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರ ವರದಿಯ ಪ್ರಕಾರ ಹುದ್ದೆಗಳನ್ನು ಕಡಿಮೆ ಮಾಡುತ್ತಾ ಬರಬೇಕು, ಹೆಚ್ಚೆಚ್ಚಿಗೆ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ಹೋಗುವುದು ಯಾವುದಕ್ಕೋಸ್ಕರ? ಇದು ಒಂದನೆಯದು. ಇನ್ನು ಎರಡನೆಯದಾಗಿ ಈಗಾಗಲೇ ಇದರ ಬಗ್ಗೆ ಪೊಲೀಸ್ ಸ್ಟೇಶನ್‌ಗಳಿಗೆ ಕಂಪ್ಲೇಂಟ್ ಕೊಡಬಹುದು, ಅಸಿಸ್ಟಂಟ್ ಕಮೀಷನ್‌ರಿಗೆ ಮತ್ತು ತಹಸೀಲ್ದಾರ್‌ರವರಿಗೆ ಕಂಪ್ಲೇಂಟ್ ಕೊಡಬಹುದು ಎನ್ನತಕ್ಕಂಥದ್ದು ಇದೆ. ಇದಕ್ಕೆ ಒಬ್ಬ ಅಧಿಕಾರಿಯೇ ಬೇಕು ಎನ್ನುವ ತೀರ್ಮಾನ ಅಥವಾ ಯೋಜನೆಯೇನಾದರೂ ಇದ್ದರೆ ಅಸಿಸ್ಟೆಂಟ್ ಕಮೀಷನರ್ ಅಥವಾ ಜಿಲ್ಲಾಧಿಕಾರಿಗಳು ಒಬ್ಬ ಎಕ್ಸ್ ಆಫಿಷಿಯೋ ಅಧಿಕಾರಿಯನ್ನು ನೇಮಕ ಮಾಡಬಹುದು. ಇದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ ಅದಕ್ಕಾಗಿ ಸಿಬ್ಬಂದಿಗಳನ್ನು ಮಾಡಿ ಕೆಲಸ ಮಾಡತಕ್ಕಂಥದ್ದು ಸರ್ಕಾರಕ್ಕೆ ದುಂದು ವೆಚ್ಚವಾಗುತ್ತದೆ. ಅದಕ್ಕೆ ಒಬ್ಬ ಪದನಿಮಿತ್ತ ಜಿಲ್ಲಾಧಿಕಾರಿಯವರನ್ನು ಅಥವಾ ಅಸಿಸ್ಟಂಟ್ ಕಮೀಷನರ್ ಮಾಡಬೇಕಾಗುತ್ತದೆ. ಅದು ಬಿಟ್ಟು, ಈಗ ನೋಡಿ, ನಿಮ್ಮ ಸಿಡಿಪಿಒ ಆಫೀಸಿಗೆ ಏನೂ ಕೆಲಸವಿಲ್ಲ.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ನಾವು ಹೆಚ್ಚಿಗೆ ಯಾವ ಅಧಿಕಾರಿಯನ್ನೂ ನೇಮಕ ಮಾಡಿರುವುದಿಲ್ಲ.

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಮಗೆ ಸ್ಪಷ್ಟವಾಗಿ ಹೇಳಿಬಿಡಿ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಒಬ್ಬ ಅಧಿಕಾರಿಗೆ 12 ಜನ ಮಲ್ಟಿ ಸ್ಟೋರೀಡ್ ಬಿಲ್ಡಿಂಗ್‌ನಲ್ಲಿ ಕೊಡುತ್ತೀರಿ ಅಲ್ಲಿ ಇಂಪ್ಲಿಮೆಂಟ್ ಮಾಡುವುದಕ್ಕೆ ಒಬ್ಬನೇ ಒಬ್ಬ ಆಫೀಸರ್, Assistant Director of women and child welfare. ಇಲ್ಲಿ ನೀವು ಸುಮ್ಮನೆ ಎಸ್ಟಾಬಿಷ್‌ಮೆಂಟ್ ಜಾಸ್ತಿ ಮಾಡಿಕೊಂಡು ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಓರಿಜಿನಲ್ ಆಕ್ಟ್‌ನಲ್ಲಿ ಪೀನಲ್ ಕ್ಲಾಸ್ ಇದೆ, ಅದನ್ನು ಇನ್ನಷ್ಟು ಸ್ಟೆಂಗ್ರನ್ ಮಾಡಿ, ಅಸಿಸ್ಟಂಟ್ ಕಮೀಷನರ್‌ವರನ್ನು ಎಕ್ಸ್ ಆಫೀಷಿಯೋ ಛೇರ್ಮನ್ ಮಾಡಿ, ಆಗ ಇದಕ್ಕೆ ಒಂದು ಅರ್ಥ ಬರುತ್ತದೆ. ಯಾರಿಗೋ ಒಬ್ಬರಿಗೆ ಒಂದು ಅಧಿಕಾರವನ್ನು ಕೊಡಬೇಕು, ಅವರಿಗೆ ಇದನ್ನು ಬಿಟ್ಟರೆ ಬೇರೆ ಇನ್ನೇನು ಕೆಲಸ? ಬಾಲ್ಯ ವಿವಾಹಗಳು ಎಲ್ಲಿ ಆಗುತ್ತವೆ ಎನ್ನುವುದನ್ನು ನೋಡುವುದಕ್ಕೆ ಒಬ್ಬ ಅಧಿಕಾರಿಯೇ. ಸಾಮೂಹಿಕ ವಿವಾಹದ ಬಗ್ಗೆ ಕೂಡ ಸರ್ಕಾರ ಒಂದು ನಿಯಂತ್ರಣವನ್ನು ಹಾಕಬೇಕಾಗುತ್ತದೆ. ಈಗ ಸಾಮೂಹಿಕ ವಿವಾಹದಲ್ಲಿ ನಡೆಯುತ್ತಿರುವುದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಿದರೆ ತಪ್ಪಾಗುತ್ತದೆ, ಇಂತಹ ಬಾಲ್ಯ ವಿವಾಹಗಳು, ಇಲ್ಲದಿದ್ದರೆ ಎರಡನೆಯ ಮದುವೆಗಳು. ಯಾರ್ಯಾರಿಗೆ ಕದ್ದು ಮದುವೆಯಾಗಬೇಕು ಎನ್ನುವುದರ ಬಗ್ಗೆ ಆಸಕ್ತಿ ಇರುತ್ತದೆ, ಸಾಮೂಹಿಕ ವಿವಾಹದಲ್ಲಿ ಮದುವೆಯಾಗತಕ್ಕಂಥದ್ದು, ನಂತರ ಫೋಟೋ ಕೊಡುವಂಥದ್ದು ಕೋರ್ಟಿಗೆ ಅದು ಇದು ಆಗುತ್ತದೆ. ಆಗ ನಿಯಂತ್ರಣವನ್ನು ಮಾಡುವುದಕ್ಕೆ ನಿಮ್ಮ ಕೈಯಿಂದ ಆಗುತ್ತದೆಯೇ? ಹಾಗಾಗಿ ಇದಕ್ಕೆ ಒಂದು ರೂಪವನ್ನು ಕೊಡದೆ ಸುಮ್ಮನೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದರೆ ದುಂದುವೆಚ್ಚವಾಗುತ್ತದೆಯೇ ಹೊರತು ಇನ್ನು ಏನೂ ಸಾಧನೆಯಾಗುವುದಿಲ್ಲ. ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ಒಬ್ಬ ಎಕ್ಸ್ ಆಫೀಷಿಯೋ ಅಧಿಕಾರಿಯನ್ನು ನೇಮಕ ಮಾಡತಕ್ಕಂಥದ್ದು ಸೂಕ್ತವೇ ಹೊರತು, ಬೇರೆ ಒಬ್ಬ ಅಧಿಕಾರಿಯನ್ನು ಜಿಲ್ಲೆಗೆ ಅಥವಾ ತಾಲ್ಲೂಕಿಗೆ ನೇಮಕ ಮಾಡತಕ್ಕಂಥದ್ದು ಬೇಡ ಎಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಏನು ಈ ಶಿಶು ವಿವಾಹ ಎಂದು ಇದೆ, ಅದನ್ನು ಅಪ್ರಾಪ್ತ ವಯಸ್ಸಿನ ಅಥವಾ ಬಾಲ್ಯವಿವಾಹ ಎಂದು ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ, ಅದು ಇಂಗ್ಲೀಷ್‌ನಲ್ಲಿ ಸರಿಯಾಗಿದೆ ಆದರೆ ಕನ್ನಡದಲ್ಲಿ ಟ್ರಾನ್ಸ್‌ಲೇಷನ್ ಮಾಡುವುದರಲ್ಲಿ ವ್ಯತ್ಯಾಸವಾಗಿದೆ, ಅದನ್ನು ಖಂಡಿತವಾಗಿ ಕನ್ನಡದಲ್ಲಿ ಸರಿ ಮಾಡಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಫನಿಷ್‌ಮೆಂಟ್ ನಾವು ಈಗಾಗಲೇ ನಾವು ರೂಲ್ಸ್‌ನಲ್ಲಿ ಅದನ್ನು ಮಾಡಿಕೊಳ್ಳುತ್ತಿದ್ದೇವೆ. Simple imprisonment up to 15 days or one month ಅಂತ ಮಾಡಿಕೊಂಡಿದ್ದೇವೆ. ಹಾಗೆಯೇ ನಮ್ಮ ಮಾನ್ಯ ಮಲ್ಲಿಕಾರ್ಜುನ್‌ರವರು ಹೇಳಿದ ಹಾಗೆ ನಾವೇನು ಹೊಸದಾಗಿ ಆಫೀಸರ್‌ನ್ನು ನೇಮಕ ಮಾಡುತ್ತಿಲ್ಲ, ತಾಲ್ಲೂಕಿನಲ್ಲಿರುವ ಸಿಡಿಪಿಒ ಇರುತ್ತಾರೆ ಅವರಿಗೆ ಇದರ ಅಡಿಷನಲ್ ವರ್ಕ್ ಕೊಡುತ್ತೇವೆ. ಯಾರೇ ಸಾಮೂಹಿಕವಾದ ಮದುವೆಯನ್ನು ಮಾಡುವವರು ಅವರ ಪರ್ಮಿಷನ್ ತೆಗೆದುಕೊಳ್ಳಬೇಕು. ಇವರು ಸರ್‌ಪ್ರೈಸ್ ಆಗಿ, ಚೆಕ್ ಮಾಡುವುದಕ್ಕೆ ಅವರಿಗೆ ಅಧಿಕಾರ ಇರುತ್ತದೆ, ಅದಕ್ಕೆ ಎಕ್ಸ್‌ಟ್ರಾ ಪೇ ಇಲ್ಲ, ಏನೂ ಇಲ್ಲ. ನೀವು ಹೇಳಿದ ಸಲಹೆಯನ್ನು ನಾವು ಅಲ್ಲಿ, ಅಳವಡಿಸಿಕೊಂಡಿರುತ್ತೇವೆ. ನಮ್ಮ ರೂಲ್ಸ್‌ನಲ್ಲಿ ಅದನ್ನು ಮಾಡಿಕೊಳ್ಳುತ್ತೇವೆ, ಎನ್ನುವ ಮಾತನ್ನು ಹೇಳುತ್ತಾ, ಈ ವಿಧೇಯಕವನ್ನು ಅಂಗೀಕರಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನೀವು ಉಳಿದಿದ್ದನ್ನು ಏನೂ ಹೇಳಲಿಲ್ಲ, 15 ದಿವಸ ಜೈಲಿಗೆ ಹೋಗುವುದಾ? ಹೋಗುತ್ತಾರೆ.

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೆ, ಯಾರಿಗೂ ಜೈಲಿಗೆ ಹೋಗುವುದಕ್ಕೆ ಇಷ್ಟವಿಲ್ಲ ಬಿಡಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್: 15 ದಿವಸ ಫನಿಷಮೆಂಟ್ ಎಂದು ಇದೆ, 15 ದಿವಸ ಜೈಲಿಗೆ ಹೋಗಿ ಬಂದು ಆಮೇಲೆ ಸಂಸಾರ ಮಾಡುತ್ತಾರೆ, ಇದು ಆಗುವುದಿಲ್ಲ. ಅದಕ್ಕೆ ತೀವ್ರತರವಾದಂಥ ಫನಿಷ್‌ಮೆಂಟ್ ಮಾಡುತ್ತೇವೆ ಎನ್ನುವುದರ ಬಗ್ಗೆ ಇಲ್ಲಿ ತನ್ನಿ. ಆಗ ಇದಕ್ಕೆ ಒಂದು ಅರ್ಥ ಬರುತ್ತದೆಯೇ ಹೊರತು ಇಲ್ಲದಿದ್ದರೆ ಏನು ಪ್ರಯೋಜನ ಆಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನನ್ನ ಇನ್ನೊಂದು ವಿನಂತಿ ಏನೆಂದರೆ, ನಮಗೆ ಗೊತ್ತಿದೆ ಮಾನ್ಯ ಸಚಿವರಿಗೂ ಗೊತ್ತಿದೆ, ಈ ರೀತಿ ಕೆಲಸಕ್ಕೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವುದರಿಂದ ಅಲ್ಲಿ ಪರಿವರ್ತನೆಯಾಗುತ್ತದೆ ಎನ್ನುವುದು ಏನಿಲ್ಲ.

ಶ್ರೀಮತಿ ಮೋಟಮ್ಮ: ಇದನ್ನು ಮಾಡುವುದರಿಂದ ಭಯ ಬರುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈಗ ಇದ್ದ ಅಧಿಕಾರಿಗಳಿಂದ ಭಯ ಇಲ್ಲವೆಂದು ಆಯಿತಲ್ಲಾ, ಈಗ ಇರುವವರು ಅಲ್ಲದೆ, ಸಿಡಿಪಿಒ ಅಧಿಕಾರಿಗಳನ್ನು ಇದಕ್ಕೆ ಇನ್‌ಚಾರ್ಜ್ ಮಾಡುವುದರಿಂದ ಭಯ ಬರುತ್ತದೆಂದು ಏನೂ ಇಲ್ಲ, ನೀವು ಮಾಡಿ. ನಾನು ಹೇಳುವುದನ್ನು ಹೇಳಿ ಮುಗಿಸಿ ಬಿಡುತ್ತೇನೆ.

ಶ್ರೀಮತಿ ಮೋಟಮ್ಮ: ಮದುವೆ ಮಾಡುವವರು ಈ ಅಧಿಕಾರಿಗಳ ಪರ್ಮಿಷನ್ ತೆಗೆದುಕೊಳ್ಳಬೇಕು. He must go and inspect.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಏನು ಹೇಳುವುದಕ್ಕೆ ಬಯಸುತ್ತೇನೆಂದರೆ, ಈಗಾಗಲೇ ತಹಸೀಲ್ದಾರ್, ಅಸಿಸ್ಟಂಟ್ ಕಮೀಷನರ್, ಸಿಡಿಪಿಒ ಅಲ್ಲಿ ಎಲ್ಲಾ ವ್ಯವಸ್ಥೆಗಳು ಸಾಕಷ್ಟು ಇವೆ. ನಮ್ಮ ತಾಲ್ಲೂಕಿನ ಮಟ್ಟದಲ್ಲಿ ಬಹಳಷ್ಟು ಅಧಿಕಾರಿಗಳ ಭಾರ ಇದೆ. ನೀವು ನೋಡಿದಿರಿ, ಬೆಂಗಳೂರಿನ ಮಲ್ಟಿಸ್ಟೋರಿಡ್ ಬಿಲ್ಡಿಂಗ್‌ನವರೆಗೆ ಆ ಭಾರದಿಂದ ನಾವು ಇವತ್ತು ಕುಗ್ಗಿ ಹೋಗುತ್ತಿದ್ದೇವೆ. ನೀವೇನು ಹೊಸ ಅಧಿಕಾರಿಗಳನ್ನು ಮಾಡುವುದಿಲ್ಲ ಒಳ್ಳೆಯದು, ಇದ್ದ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ಕೊಡುತ್ತೀರಿ ಕೊಡಿ, ನಾವು ಅದನ್ನು ಯಾವುದೂ ವಿರೋಧಿಸುತ್ತಿಲ್ಲ, ಸರ್ಕಾರ ಇದಕ್ಕಿಂತಲೂ ಮುಖ್ಯವಾಗಿ ಯಾವ ಸಮಾಜದಲ್ಲಿ ಯಾವ ಭಾಗದಲ್ಲಿ ಇಂತಹ ರೂಢಿಗಳು ಮತ್ತು ಪರಂಪರೆಗಳು ಇದೆ, ಇದನ್ನು ಗುರ್ತಿಸಿ ಅವರನ್ನು ಜಾಗ್ರತೆಗೊಳಿಸುವಂಥ ಅವರಿಗೆ ಈ ಒಂದು ಅಪ್ರಾಪ್ತ ವಯಸ್ಸಿನ ಮಕ್ಕಳ ಮದುವೆಯನ್ನು ಮಾಡುವುದರಿಂದ ದುಷ್ಪರಿಣಾಮಗಳ ಬಗ್ಗೆ ಶಿಕ್ಷಣಕೊಟ್ಟು ಅವರಿಗೆ ಹೆಚ್ಚೆಚ್ಚು ತಿಳುವಳಿಕೆಯನ್ನು ಕೊಟ್ಟು ಅವರಲ್ಲಿ ಜಾಗ್ರತಿಯನ್ನು ತರುವುದಕ್ಕೆ ಹೆಚ್ಚೆಚ್ಚು ಒತ್ತನ್ನು ಕೊಡಬೇಕು. ಇದು ವಿಶೇಷವಾಗಿ ಎಲ್ಲಾ ಕಡೆ ಆಗುವುದಿಲ್ಲ, ನಮ್ಮ ಕಡೆ ಬಂದು ನೀವು ಇದರ ಬಗ್ಗೆ ಏನು ಹೇಳುವುದೂ ಕೇಳುವುದೂ ಬೇಡ, ಇಲ್ಲಿ ಆಗುವುದಿಲ್ಲ. ಎಲ್ಲಿ ಆಗುವುದೆಂದರೆ, ಕೆಲವೊಂದು ಸಮಾಜದಲ್ಲಿ ಆಗುತ್ತದೆ, ಭೌಗೋಳಿಕವಾದಂಥ ಕೆಲವು ಭಾಗಗಳಲ್ಲಿ ಆಗುತ್ತದೆ, ಇದನ್ನು ಗುರ್ತಿಸಿ ಇದನ್ನು ಆಯಾ ತಾಲ್ಲೂಕಾ ಮಟ್ಟದಲ್ಲಿ ಅಲ್ಲ, ಜಿಲ್ಲಾಧಿಕಾರಿಗಳ ಮಟ್ಟದಲ್ಲೋ ಅಥವಾ ಅದನ್ನು ರಾಜ್ಯಮಟ್ಟದಲ್ಲಿಯೋ ಇದು ಆಗಿರುವ ಬಗ್ಗೆ ಎಲ್ಲೆಲ್ಲಿ ಕಂಪ್ಲೇಂಟ್ಸ್‌ಗಳು ಇದುವರೆಗೆ ಬಂದಿದೆ, ಈ ರೀತಿಯಾದಂಥ ಸಂಸ್ಕೃತಿ ಈ ಶಬ್ದ ಸರಿಯಾಗಲಿಕ್ಕಿಲ್ಲ, ಆ ರೀತಿಯಾದ ರೂಢಿ ಅದು ಎಲ್ಲೆಲ್ಲಿ

ಇದೆಯೋ ಅದನ್ನು ಗುರ್ತಿಸಿ ಅದಕ್ಕೆ ವಿಶೇಷವಾದಂಥ ಕ್ರಮ ತೆಗೆದುಕೊಳ್ಳುವುದಕ್ಕೆ ತಮ್ಮ ಇಲಾಖೆಯಿಂದ ಈ ಅಧಿಕಾರಿಗಳಿಗೆ ವಿಶೇಷವಾದಂಥ ಜವಾಬ್ದಾರಿಯನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅವರು ಯಾವುದಾದರೊಂದು ಅರ್ಜಿ ಬರಲಿ ಎಂದು ಕಾಯುತ್ತಿರುತ್ತಾರೆ. ಸಾಮೂಹಿಕವಾದ ಮದುವೆಗೆ ಯಾರಾದರೂ ಪರ್ಮಿಷನ್‌ಗೆ ಬರಲಿ ಎಂದು, ಅವರು ಆಫೀಸಿನಲ್ಲಿ ಕುಳಿತುಕೊಂಡಿರುತ್ತಾರೆ. ಇವರು ಆಫೀಸಿನಲ್ಲಿಯೇ ಇರುವುದು, ಅವರು ಬಂದು ಪರ್ಮಿಷನ್ ತೆಗೆದುಕೊಳ್ಳುವುದು, ಆಮೇಲೆ ಇವರು ಹೋಗಿ ಇನ್ಸ್‌ಪೆಕ್ಷನ್ ಮಾಡುವುದು ಇವೆಲ್ಲಾ ಯೋಚನೆ ಸರಿ, ಆದರೆ ಇವರು ಸ್ವತಃ ಆ ಸಮಾಜದ ಜನರಲ್ಲಿ ಜಾಗ್ರತಿಯನ್ನು ತರುವುದರ ಬಗ್ಗೆ ತಾವು ತಮ್ಮ ಇಲಾಖೆಯ ವತಿಯಿಂದ ಈ ಅಧಿಕಾರಿಗಳಿಗೆ ಹೆಚ್ಚಿನ ಒಂದು ಜವಾಬ್ದಾರಿ ಕೊಡುವಂಥದ್ದು ಆಗಬೇಕೆನ್ನುವುದರ ಬಗ್ಗೆ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಸಾಮೂಹಿಕ ವಿವಾಹದಲ್ಲಿ ಯಾರು ಆರ್ಗನೈಸರ್ ಯಾರು ಇರುತ್ತಾರೆ, ಅವರು ನಿಮ್ಮ ಅಧಿಕಾರಿಗಳ ಹತ್ತಿರ ಪರ್ಮಿಷನ್ ತೆಗೆದುಕೊಳ್ಳಬೇಕಾಗುತ್ತದೆ. ಯಾರ್ಯಾರು ಮದುವೆಯಾಗುತ್ತಾರೆ. ಅವರು ವೇಜ್ ಸರ್ಟಿಫಿಕೇಟ್, ದಾಖಲೆಗಳ ಬಗ್ಗೆ ಮೊದಲೇ ವೆರಿಫೈ ಮಾಡಬೇಕು, ಮತ್ತು ಅವರ ಹಿನ್ನೆಲೆ ಏನು? ಇಲ್ಲದಿದ್ದರೆ ಏನು ಮಾಡುತ್ತಾರೆಂದರೆ, ಸದ್ಭಾವನೆ ತೆಗೆದುಕೊಂಡ ಕ್ರಮಕ್ಕೆ ರಕ್ಷಣೆ ಎನ್ನುವ ಪ್ರಶ್ನೆ ಎಂದು ತೆಗೆದುಕೊಳ್ಳಬಾರದು, He should be responsible for that. ಈ ಒಂದು ಸೆಕ್ಷನ್‌ನ್ನು ಹಾಕಿ ಅದರ ಕೆಳಗಡೆ ರಕ್ಷಣೆಯನ್ನು ತೆಗೆದುಕೊಳ್ಳುವುದು ಗುಡ್‌ಫೈಥ್, ಅದರಿಂದ ರಕ್ಷಣೆಯನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿಯನ್ನು ತರಬಾರದು, ಅದಕ್ಕೋಸ್ಕರ ಆ ಅಧಿಕಾರಿಗಳು ಎಲ್ಲಿ ಸಾಮೂಹಿಕ ಮದುವೆಗಳಾಗುತ್ತದೆ ಅವರು ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ವಿಮರ್ಶೆಯನ್ನು ಮಾಡಿ ಪ್ರತಿಯೊಂದು ಮದು ಮಗ ಮತ್ತು ಮಧುಮಗಳದ್ದು ವಿಜ್ ಸರ್ಟಿಫಿಕೇಟ್ ಮತ್ತು ಅವರ ಹಿನ್ನೆಲೆ ಎಲ್ಲಾ ವಿವರಗಳನ್ನು ತಿಳಿದುಕೊಳ್ಳುವಂತಹ ಜವಾಬ್ದಾರಿಯನ್ನು ಅವರಿಗೆ ಕೊಡಬೇಕಾಗುತ್ತದೆಂದು ನಾನು ತಮ್ಮ ಮುಖಾಂತರ ಅವರಲ್ಲಿ ಕೇಳಿಕೊಳ್ಳುತ್ತೇನೆ. ಸದ್ಭಾವನೆ ಮತ್ತು ಪರಂತು ಎರಡು ತೆಗೆದುಹಾಕಿಬಿಟ್ಟರೆ ಸರಿಯಾಗುತ್ತದೆ.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಜಯಪ್ರಕಾಶ್ ಹೆಗಡೆಯವರೆ, ಗಂಡಸರುಗಳು ಎರಡು ಮತ್ತು ಮೂರು ಮದುವೆಯಾಗುತ್ತಾರೆ. ಸತ್ಯವನ್ನು ಯಾರೂ ಕೂಡ ಹೇಳುವುದಿಲ್ಲ. ಅದರಲ್ಲೂ ಬಂದು ಸುಳ್ಳು ಹೇಳಿ ಮಾಡಿಕೊಂಡರೆ ಏನು ಮಾಡುವುದಕ್ಕಾಗುತ್ತದೆ? ಸಾಮೂಹಿಕ ಮದುವೆಯ ಸಂದರ್ಭದಲ್ಲಿ ಬಂದು ಇಲ್ಲ ನಾನು ಒಂದೇ ಮದುವೆಯಾಗಿರುವುದು ಎಂದು ಹೇಳಿದರೆ ನಾವು ಏನು ಮಾಡುವುದಕ್ಕಾಗುತ್ತದೆ? ಎಷ್ಟೋ ಜನ ಎರಡು ಮತ್ತು ಮೂರು ಮದುವೆ ಮಾಡಿಕೊಂಡಿರುತ್ತಾರೆ ಅವರು ಹೇಳಿದ್ದಾರಾ? ಇದು ಒಂದೂ ಕೂಡ ಸಾಮಾಜಿಕವಾದ ಪಿಡುಗು. ಮಾನ್ಯ ವಿಶ್ವೇಶ್ವರ ಹೆಗಡೆಯವರೆ, ಇವರಿಗೇನು ತಿಳುವಳಿಕೆ ಹೇಳುವುದು, ಹೇಳಿ ನೋಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಪುರುಷರ ದೌರ್ಬಲ್ಯ ಮತ್ತು ಮಹಿಳೆಯರ ದೌರ್ಬಲ್ಯ ಚರ್ಚೆ ಮಾಡುವುದಿದ್ದರೆ ಬೇರೆ ಬೇರೆ ಚರ್ಚೆ ಮಾಡೋಣ. ಅದು ಬೇರೆ ವಿಷಯ, ಆದರೆ ಎಲ್ಲರಲ್ಲಿಯೂ ಏನೇನು ದೌರ್ಜನ್ಯಗಳು ಇದೆಯೋ ಆ ಚರ್ಚೆ ವಿಷಯವೇ ಬೇರೆ. ನಾನು

ಹೇಳುತ್ತಿರುವುದೇನೆಂದರೆ ಜಾಗೃತಿ ಉಂಟುಮಾಡುವುದಕ್ಕೆ ಪ್ರಯತ್ನವನ್ನು ಮಾಡಬೇಕು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಸಾಮೂಹಿಕ ವಿವಾಹಗಳಲ್ಲಿ ಸಾಮಾನ್ಯವಾಗಿ ಈ ಏಜ್ ಬಗ್ಗೆ ಇದು ಬಹಳ ಇಂಪಾರ್ಟ್‌ಟೆಂಟ್. ಆ ಭರ್ತ್ ಸರ್ಟಿಫಿಕೇಟ್ ಕೊಟ್ಟರೂ, ಸರಿಯಾದ ಭರ್ತ್ ಸರ್ಟಿಫಿಕೇಟನ್ನು ಕೊಡುವುದಿಲ್ಲ. ಏಕೆಂದರೆ, ಯಾರೋ ಹಳ್ಳಿಗಳಲ್ಲಿ ಅದನ್ನು ಬರೆದಿರುವುದಿಲ್ಲ. ಆದ್ದರಿಂದ ಅದೊಂದು ಮಹತ್ವವಾಗಿದೆ. ಎರಡನೆಯದಾಗಿ ಹೇಳುವುದಾದರೆ ಎರಡು ಮತ್ತು ಮೂರನೇ ಮದುವೆ ಎಂದರೆ ಬಹುಶಃ ನೀವು ವೆರಿಫಿಕೇಷನ್ ಮಾಡದೆ ಇದ್ದರೆ ಏನೂ ಆಗುವುದಿಲ್ಲ. ಆ ಬಗ್ಗೆ ನೀವು ವೆರಿಫಿಕೇಷನ್‌ನ್ನು ಮಾಡಲೇಬೇಕಾಗುತ್ತದೆ. ಆದ್ದರಿಂದ ನೀವು ಏನು ಅಧಿಕಾರಿಗೆ ಅಧಿಕಾರವನ್ನು ಕೊಟ್ಟಿದ್ದೀರಿ. he has to verify before the marriage ಸಾಮೂಹಿಕ ವಿವಾಹದ ಆರೆಂಟ್‌ಮೆಂಟ್ ಆಗುವಾಗ ಅದು ಬಹಳ ಮುಖ್ಯವಾದುದು. ಏಕೆಂದರೆ ಸುಮಾರು 20 ದಿನದಲ್ಲಿ ಒಂದು ಮದುವೆಯಾಯಿತು, ಅಲ್ಲಿ ಅವನು ಎರಡನೆ ಮದುವೆ ಮಾಡಿಕೊಳ್ಳುತ್ತಿದ್ದಾನೆ. ಅದು ನಮಗೆ ಗೊತ್ತಿರಲಿಲ್ಲ. ಆ ಮದುವೆಗೆ ನನ್ನನ್ನು ಕರೆಸಿದ್ದರು. ಏಕೆಂದರೆ, ನಾನು ಸಾಮೂಹಿಕ ಮದುವೆಗಳಲ್ಲಿ ಅನೇಕ ಮದುವೆಗಳಲ್ಲಿ ನಾನು ಭಾಗಿಯಾಗಿದ್ದೇನೆ. ನಾನು ಅಲ್ಲಿ ವಿವಾಹವಾಗುವವರಿಗೆ ನೋಡಿ ನಾಳೆ ದಿವಸ ನಮ್ಮನ್ನು ಕೋರ್ಟಿಗೆ ಬರುವ ಹಾಗೆ ಮಾಡಬೇಡಿ ಎಂದು ಹೇಳುತ್ತೇನೆ. ಯಾವ ರೀತಿಯಲ್ಲೂ ತಪ್ಪುಗಳಿರಬಾರದು, ಕರೆಕ್ಟಾಗಿ ಇರಬೇಕು, ಹೆಂಡತಿಯನ್ನು ಸರಿಯಾಗಿ ನೋಡಿಕೊಳ್ಳಬೇಕು. ಅರ್ಧಾಂಗಿಯೂ ಕೂಡ ಗಂಡನನ್ನು ಚೆನ್ನಾಗಿ ನೋಡಿಕೊಳ್ಳಬೇಕು ಇವೆಲ್ಲಾ ವಿಚಾರಗಳನ್ನು ಹೇಳಿ ಇಂತಹ ಕೇಸುಗಳಲ್ಲಿ ನಾನು ನನ್ನೆ ವಿಟ್‌ನೆಸ್ ಆಗಿ ಕೊಟ್ಟಿದ್ದಾರೆ. ನಾನು 15 ವರ್ಷದ ಹಿಂದೆ ಸಾಮೂಹಿಕ ಮದುವೆಯನ್ನು ಮಾಡಿಸಿದ್ದೆ. ಅಲ್ಲಿ 50 ಜನರಿಗೆ ಮಾಡಿಸಿದ್ದೆ ನನಗೆ ಗೊತ್ತಿಲ್ಲ, ಅಲ್ಲಿಗೆ ಸುಬ್ಬಾರೆಡ್ಡಿಯವರು ಬಂದಿದ್ದರು ಎಂದು ಹೇಳಿದ್ದರು. ಜಡ್ಜ್ ನೀವು ವಿಟ್‌ನೆಸ್‌ಗೆ ಬನ್ನಿ ಎಂದು ಹೇಳಿದರು, ಅಲ್ಲಿಗೆ ನಾನು ಹೋಗಿದ್ದಾಯಿತು. ಹಿಂದಿನದೂ ಏನೂ ಗೊತ್ತಿಲ್ಲವೆಂದು ಹೇಳಿದೆ. ಅಂತೂ ಇಂತೂ ಸಾಮೂಹಿಕ ಮದುವೆಗೆ ನಾನು ಹೋಗಿದ್ದೆ ಎಂದು ಹೇಳಿದೆ. ಇವರಿಬ್ಬರೂ ಮದುವೆಯಾಗಿರುವುದು ನಿಜ, ಫೋಟೋ ಇದೆ, ನನ್ನ ಫೋಟೋ ಇದೆ, ಅಲ್ಲಿಗೆ ಸ್ವಾಮಿಗಳೊಬ್ಬರು ಬಂದಿದ್ದರು, ಹೀಗೆ ಎಲ್ಲಾ ಆದಾಗ ನಾವು ಏನು ಮಾಡುವುದಕ್ಕಾಗುತ್ತದೆ? ಸರಿಯಾಗಿ ನಡೆದುಕೊಳ್ಳಬೇಕು, ವೆರಿಫಿಕೇಷನ್‌ನ್ನು ಮಾಡಲೇಬೇಕಾಗುತ್ತದೆ. 2–3ನೇ ಮದುವೆಯಾಗಿರುವುದು ಗೊತ್ತಾಗದೆ ಇದ್ದರೆ penal action ಇದೆ. Bigamy is forbidden. So, you must care of this. Particularly, ಈ ಬಿಲ್‌ನಲ್ಲಿ ನೀವು ಅಧಿಕಾರವನ್ನು ಅವರಿಗೆ ಕೊಡಬೇಕಾಗುತ್ತದೆ. ಅವರು ಅದನ್ನು ವೆರಿಫೈ ಮಾಡಿ then he should give green signal. ಅದು ಆದಾಗ ಮಾತ್ರ ಅದರಲ್ಲಿ ತಿರುಗಿ ಕರಷನ್, ಇದು ಬಹಳ ಕಷ್ಟ ನೀವು ಏನು ಮಾಡುತ್ತೀರಿ ಅಂದರೆ, ಅವನು ಮದುವೆ ಮಾಡಬೇಕೆನ್ನುತ್ತಾರೆ, ಎಲ್ಲರೂ ಸಹಾಯ ಮಾಡೋಣವೆಂದು ಆರೆಂಜ್ ಮಾಡಿದರೆ ಅಲ್ಲಿ ಅಧಿಕಾರಿಗೆ ಅಧಿಕಾರ ಕೊಡುತ್ತೇವೆ, ಯಾವ ಆಫೀಸ್‌ನಲ್ಲಿ ಫ್ರೀ ಫ್ರಮ್ ಕರವೆಕ್ಷನ್ ಎಲ್ಲಿದೆ ಹೇಳಿ? ಎಲ್ಲೋ ಇದ್ದಾರೆ, ಒಳ್ಳೆಯವರು ಇದ್ದಾರೆ, ಅಂತಹವರು ಸಿಕ್ಕುವುದು ಬಹಳ ಕಷ್ಟ. ವೆರಿಫಿಕೇಷನ್ ಬಗ್ಗೆ ಭಯ ಇರಬೇಕು, ನೋಡಿ ಏನಾದರೂ ಆದರೆ ನಿಮಗೆ ಫೀನಲ್ ಆಕ್ಷನ್ ಇದೆ, ಇದನ್ನು ದಯವಿಟ್ಟು ಮಾಡಬಾರದು ಮೊದಲನೆಯ ಮದುವೆ, ಏಜ್, ಫರ್‌ಫೆಕ್ಟ್ ಆಗಿ ಇರಬೇಕು, ಭಯ ಬರುವ ಹಾಗೆ psychologically you must have this. ಅದು ಬಂದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಕಾನೂನು ಬದ್ದವಾಗಿ ನೀವು ಏನು ಮಾಡುತ್ತೀರಿ, ಸಾಮೂಹಿಕವಾಗಿ 50 / 100

ಮದುವೆಗಳನ್ನು ಮಾಡುತ್ತಾರೆ, ನಾನು ಅನೇಕ ಸಾಮೂಹಿಕ ಮದುವೆಗಳಲ್ಲಿ ನೋಡಿದ್ದೇನೆ. ಯಾವ ವೆರಿಫಿಕೇಷನ್ಸ್‌ಗಳೂ ಇರುವುದಿಲ್ಲ, ಅದಕ್ಕೆ ಬಹಳ ಮುಖ್ಯವಾದುದನ್ನು ತಾವು ದಯವಿಟ್ಟು ಅವರಿಗೆ ಅಧಿಕಾರವನ್ನು ಕೊಟ್ಟು ಅವರಿಂದ ವಿಷಯವನ್ನು ತಿಳಿದುಕೊಂಡು thereafter, they must go ahead with that. ಸಾಮೂಹಿಕ ಮದುವೆಗಳಾಗಬೇಕು ಎನ್ನುವುದು ಬಹಳ ಮುಖ್ಯವಾದುದು.

ಶ್ರೀಮತಿ ಮೋಟಮ್ಮ (ಮಹಿಳಾ ಮಕ್ಕಳ ಕಲ್ಯಾಣ ಸಚಿವರು): ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆಯವರು ಹೇಳಿದ್ದು, ಒಪ್ಪಿಕೊಳ್ಳಬಹುದು ಏಕೆಂದರೆ, ನಾವು ಈಗಾಗಲೇ ಸಾಕಷ್ಟು ಭ್ರೂಣಹತ್ಯೆ, ಮತ್ತು ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮದುವೆ ಮಾಡುವುದು ನಿಲ್ಲಿಸಬೇಕೆಂದು ಆರೋಗ್ಯ ಇಲಾಖೆಯವರು, ಆರೋಗ್ಯ ದೃಷ್ಟಿಯಿಂದ ಹೇಳುತ್ತಾರೆ. 18 ವರ್ಷಗಳ ನಂತರವೇ ಮದುವೆ ಮಾಡಬೇಕೆಂದು ಹೇಳುತ್ತಾರೆ. ನಾವು ಕೂಡ ಸಾಮಾಜಿಕವಾಗಿ ಚಿಂತನೆ ಮಾಡಿ ತಿಳುವಳಿಕೆಯನ್ನು ಕೊಡುವ ಕೆಲಸವನ್ನು ನಮ್ಮ ಇಲಾಖೆಯಿಂದ ಮತ್ತು ಮಹಿಳಾ ಅಭಿವೃದ್ಧಿ ನಿಗಮದಿಂದ ಮಾಡುವ ಬಗ್ಗೆ ನಾವು ಈಗಾಗಲೇ ಕೆಲಸವನ್ನು ಮಾಡುತ್ತಿದ್ದೇವೆ. ಹಾಗೆಯೇ ಫನಿಶ್‌ಮೆಂಟ್ ಬಗ್ಗೆ ಹೇಳಿದಹಾಗೆ ಸೆಕ್ಷನ್ 3 ಅಪ್ ದಿ ಓರಿಜಿನಲ್ ಆ್ಯಕ್ಟ್‌ನಲ್ಲಿ ಸ್ಪೆಸಿಪಿಕ್ಕಾಗಿ ಫನಿಶ್‌ಮೆಂಟ್ ಮಾಡುವವರು ಮತ್ತು ಏನು ಕಾರಣಕರ್ತರಿರುತ್ತಾರೆ ಬಾಲ್ಯವಿವಾಹ ಪದ್ಧತಿಗೆ ಅವರಿಗೂ ಕೂಡ ಅದರಲ್ಲಿ ಫನಿಶ್‌ಮೆಂಟ್ ಬಗ್ಗೆ ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಜಯಪ್ರಕಾಶ್ ಹೆಗಡೆಯವರು ಹೇಳಿದ ಹಾಗೆ ಒಂದೊಂದು ಸಾರಿ ನಮ್ಗೆ ಗೊತ್ತಾಗುವುದಿಲ್ಲ, 13ನೇ ವರ್ಷದ ಸಾಮೂಹಿಕ ಮದುವೆ ಕಾರ್ಯವನ್ನು ಮೂಡಿಗೆರೆಯಲ್ಲಿ ಮಾಡುತ್ತೇವೆ, ಧರ್ಮಸ್ಥಳದವರು ಈಗಾಗಲೇ 100 ವರ್ಷದ ಮೇಲಾಯಿತು ಮಾಡಿಕೊಂಡು ಬಂದಿದ್ದಾರೆ. ಒಂದೊಂದು ಎರಡನೇಯದು ಅಥವಾ ಮೂರನೆಯ ಮದುವೆ ಎಂಬುದು ನಮಗೆ ಗೊತ್ತಾಗುವುದೇ ಇಲ್ಲ. ಈಗ ಉಡುಪಿಯಲ್ಲಿ ಬಹುಪತ್ನಿವಲ್ಲಭ್ ಅಂತ ಹೇಳಿ ಏಳು ಮದುವೆಯನ್ನು ಮಾಡಿಕೊಂಡು ದೊಡ್ಡಟೈಟಲ್ ಹಾಕಿ ನಮ್ಮ ಎಲ್ಲಾ ಪರ್ತಕರ್ತರು ಬರೆದಿರುವ ಬಗ್ಗೆ ತಮಗೆಲ್ಲರಿಗೂ ನೆನಪು ಇರಬಹುದು. ಏಳು ಮದುವೆ ಮಾಡಿಕೊಳ್ಳುವವರೆಗೂ ಗೊತ್ತಿಲ್ಲವೆಂದರೆ ಹೇಗೆ ಕಂಡುಹಿಡಿಯುವುದು ಹೇಳಿ? ನಮ್ಮ ಆಫೀಸರ್‌ಗೆ ಹೇಗೆ ಅದು ಗೊತ್ತಾಗುತ್ತದೆ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ನಾನು ಏನು ಹೇಳುತ್ತೇನೆಂದರೆ, ಆದ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕಿಂತ ಸ್ಟ್ರಿಜೆಂಟ್ ಕಾನೂನು ಇದ್ದರೆ prevention is better than cure.

ಶ್ರೀ ಮೋಟಮ್ಮ: ಅಲ್ಲಾ ಗೊತ್ತಾಗಬೇಕಲ್ಲಾ. ಅದು ಗೊತ್ತಾದರೆ ಖಂಡಿತ ಕ್ರಮ ತೆಗೆದುಕೊಳ್ಳೋಣ. ಅವನಿಗೆ ಅವಕಾಶವನ್ನು ಕೊಡಬಾರದು. ಅದು ಗೊತ್ತಾಗುವುದಿಲ್ಲವೆಂದು ನಾನು ಹೇಳುವುದು. ಆತನು ಏಳು ಮದುವೆಯಾಗುವವರೆಗೂ ಆ ತಾಲ್ಲೂಕಿನವರೆಗೆ ಗೊತ್ತಿಲ್ಲವೆಂದರೆ ಇದರ ಬಗ್ಗೆ ನೀವೇ ಹೇಳಿ? ಒಂದೊಂದು ಸಾರಿ ಈ ರೀತಿಯಲ್ಲಾ ಆಗುತ್ತದೆ. ಅದನ್ನು ಸಹ ನಮ್ಮ ಆಫೀಸರ್ ಏನು ಕನ್ಸರ್ನ್ಡ್ ಇದ್ದಾರೆ ಅವರು ಗುರುತಿಸಬೇಕೆಂದು ನಾವು ರೂಲ್ಸ್‌ನಲ್ಲಿ ಅಳವಡಿಸಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತಾ ದಯಮಾಡಿ ತಾವೆಲ್ಲರೂ ಇಂತಹ ಒಂದು ಒಳ್ಳೆಯ ವಿಧೇಯಕಕ್ಕೆ ಅಂಗೀಕಾರ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2004ರ ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:– "ಖಂಡ 2 ಈ ವಿಧೇಯಕ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, "2004ರ ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "2004ರ ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು: ಈಗ ಸಹಕಾರಿ ಮಂತ್ರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ವಿಧೇಯಕ 2004 ಮಂಡಿಸಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, "ಸೌಹಾರ್ದ ಸಹಕಾರಿ (ತಿದ್ದುಪಡಿ) ಕಾನೂನಿನ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕು. ಇಲ್ಲಿ ಎಸ್.ಎಸ್. ಪಾಟೀಲರಂತ ಹಿರಿಯ ಸದಸ್ಯರು ಇಲ್ಲ. ಅದು ಚರ್ಚೆಗೆ ಒಳಪಡಬೇಕು.

ಶ್ರೀ ಹೆಚ್. ವಿಶ್ವನಾಥ್ (ಸಹಕಾರಿ ಸಚಿವರು): ಮಾನ್ಯ ಆಯಿತು ಬಿಡಿ. ಮೊದಲನೆಯ ವಿಧೇಯಕ ಒಂದು ಇದೆ, ಎರಡನೆಯದು ಸೌಹಾರ್ದ ಸಹಕಾರಿ (ತಿದ್ದುಪಡಿ).

VII ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2004

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್. ವಿಶ್ವನಾಥ್ (ಸಹಕಾರಿ ಸಚಿವರು): ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

1.00 ಪಿಎಂ

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು): ಕೆಲವು ತಿದ್ದುಪಡಿಗಳನ್ನು ತರಬೇಕೆನ್ನುವ ಬಯಕೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾನೂನಿಗೆ ಯಾರು ಹೋಗಿದ್ದಾರೆ, ಅವರು ಮತ್ತೆ